# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 307 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 06-03-2025 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪ್ರವಾಸಿ ತಾಣಗಳ ಸಂಖ್ಯೆ ಎಷ್ಟು; ಈ ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ; | ಕರ್ನಾಟಕ ಪ್ರವಾಸೋದ್ಯಮ ನೀತಿ 2020-26ರಡಿಯಲ್ಲಿ ರಾಜ್ಯದಲ್ಲಿ ಒಟ್ಟು 810 ಪ್ರವಾಸಿ ತಾಣಗಳನ್ನು ಗುರುತಿಸಲಾಗಿತ್ತು.<br><br>ಇಲಾಖೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆಗೆ ಅನುಗುಣವಾಗಿ ಅಗತ್ಯತೆಯ ಅನುಸಾರ ಪ್ರವಾಸಿ ತಾಣಗಳಲ್ಲಿ ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ.<br><br>ಪ್ರಸ್ತುತ, 2024-29ರ ಕರ್ನಾಟಕ ಪ್ರವಾಸೋದ್ಯಮ ನೀತಿಯನ್ನು ಜಾರಿಗೆ ತರಲಾಗಿದ್ದು, ಇಲಾಖೆಯಿಂದ ನೂತನ ಪ್ರವಾಸಿ ತಾಣಗಳನ್ನು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯುವ ಮೂಲಕ ಗುರುತಿಸಿ, ಅವುಗಳನ್ನು ಇಲಾಖೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆಗೆ ಅನುಗುಣವಾಗಿ ಅಗತ್ಯತೆಯ ಅನುಸಾರ ಪ್ರವಾಸಿ ತಾಣಗಳಲ್ಲಿ ಕೊರತೆ ಇರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುವುದು.<br><br>ಇದಲ್ಲದೇ, "ಒಂದು ಜಿಲ್ಲೆ ಒಂದು ತಾಣ" ಯೋಜನೆಯಡಿ **ಅನುಬಂಧ**ದಲ್ಲಿರುವ ಪ್ರತಿ ಜಿಲ್ಲೆಗೆ ಒಂದು ಪ್ರವಾಸಿ ತಾಣವನ್ನು ಸಮಗ್ರವಾಗಿ ಜಿಲ್ಲಾ ಮಟ್ಟದಲ್ಲಿ ಆದ್ಯತೆಯ ಮೇರೆಗೆ ವಿವಿಧ ಇಲಾಖೆಗಳ ವಿವಿಧ ಯೋಜನೆಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿರುತ್ತದೆ. |
| ಆ) | ರಾಜ್ಯದಲ್ಲಿರುವ ಪ್ರವಾಸಿ ತಾಣಗಳಲ್ಲಿ ಎಷ್ಟು ಪ್ರವಾಸಿ ತಾಣಗಳನ್ನು ಆದ್ಯತೆ ಮೇಲೆ ಪರಿಗಣಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ ; | |
| ಇ) | ರಾಜ್ಯದಲ್ಲಿರುವ ಪಾರಂಪರಿಕ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೇ ಸಾರ್ವಜನಿಕರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಬಂದಿದೆ.<br><br>ಇಲಾಖೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆಗೆ ಅನುಗುಣವಾಗಿ ಅಗತ್ಯತೆಯ ಅನುಸಾರ ಪ್ರವಾಸಿ ತಾಣಗಳಲ್ಲಿ ಕೊರತೆ ಇರುವ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ) | ರಾಜ್ಯದ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಬರುತ್ತಿರುವ ಪ್ರವಾಸಿಗರ ಸುರಕ್ಷತೆಗಾಗಿ ಸರ್ಕಾರ ಕೈಗೊಂಡಿರುವ ಸುರಕ್ಷತ ಕ್ರಮಗಳೇನು; | ರಾಜ್ಯದ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಭೇಟಿ ನೀಡುತ್ತಿರುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರ ಸುರಕ್ಷತೆಗಾಗಿ ಗೃಹರಕ್ಷಕ ದಳದ ಸಿಬ್ಬಂದಿಗಳಿಗೆ ಇಲಾಖೆಯಿಂದ ತರಬೇತಿ ನೀಡಿ, ಪ್ರಮುಖ ಪ್ರವಾಸಿ ತಾಣಗಳಿಗೆ "ಪ್ರವಾಸಿ ಮಿತ್ರ" ಹೆಸರಿನಡಿ ನಿಯೋಜಿಸಲಾಗಿರುತ್ತದೆ.<br><br>ಇದಲ್ಲದೇ, ಜಿಲ್ಲಾಡಳಿತ, ಪೋಲೀಸ್ ಇಲಾಖೆ, ಅರಣ್ಯ ಇಲಾಖೆಗಳ ಸಹಯೋಗದೊಂದಿಗೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಸೂಚನಾ ಫಲಕಗಳನ್ನು ಹಾಗೂ ಮಾರ್ಗಸೂಚಿಗಳನ್ನು ಅಳವಡಿಸಲಾಗಿರುತ್ತದೆ. |

**TOR 33 TDV 2025**

**(ಎಚ್.ಕೆ. ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು.

# ಅನುಬಂಧ

## "ಒಂದು ಜಿಲ್ಲೆ- ಒಂದು ತಾಣ" ಯೋಜನೆ ಅಡಿಯಲ್ಲಿ ಅಭಿವೃದ್ಧಿಗಾಗಿ ಗುರುತಿಸಲಾದ ಸ್ಥಳಗಳು

| ಕ್ರ. ಸಂ. | ಜಿಲ್ಲೆ | ಪ್ರವಾಸಿ ತಾಣಗಳು |
|---|---|---|
| 1. | ಬಾಗಲಕೋಟೆ | ಬಾದಾಮಿ ಗುಹಾಂತರ ದೇವಾಲಯಗಳು |
| 2. | ಬಳ್ಳಾರಿ | ಸಂಗನಕಲ್ಲು |
| 3. | ಬೆಳಗಾವಿ | ಗೋಕಾಕ್ ಜಲಪಾತ |
| 4. | ಬೆಂಗಳೂರು ಗ್ರಾಮಾಂತರ | ಮಾಕಳಿದುರ್ಗ |
| 5. | ಬೆಂಗಳೂರು ನಗರ | ರೋರಿಚ್ ಮತ್ತು ದೇವಿಕಾರಾಣಿ ಎಸ್ಟೇಟ್ |
| 6. | ಬೀದರ್ | ಬೀದರ್ ಕೋಟೆ |
| 7. | ಚಾಮರಾಜನಗರ | ಭರಚುಕ್ಕಿ ಜಲಪಾತ |
| 8. | ಚಿಕ್ಕಬಳ್ಳಾಪುರ | ನಂದಿ ಬೆಟ್ಟ |
| 9. | ಚಿಕ್ಕಮಗಳೂರು | ಕೆಮ್ಮಣ್ಣುಗುಂಡಿ |
| 10. | ಚಿತ್ರದುರ್ಗ | ವಾಣಿ ವಿಲಾಸ ಸಾಗರ್ ಅಣೆಕಟ್ಟು |
| 11. | ದಕ್ಷಿಣ ಕನ್ನಡ | ತಣ್ಣೀರುಭಾವಿ ಬೀಚ್ |
| 12. | ದಾವಣಗೆರೆ | ಶಾಂತಿಸಾಗರ ಕೆರೆ |
| 13. | ಧಾರವಾಡ | ನೃಪತುಂಗ ಬೆಟ್ಟ |
| 14. | ಗದಗ | ಕಪ್ಪತಗುಡ್ಡ |
| 15. | ಹಾಸನ | ಬೇಲೂರು ಶ್ರೀ ಚೆನ್ನಕೇಶವ ಸ್ವಾಮಿ ದೇವಸ್ಥಾನ |
| 16. | ಹಾವೇರಿ | ಶರೀಫಗಿರಿ ಶಿಶುನಾಳ |
| 17. | ಕಲಬುರಗಿ | ಗಾಣಗಾಪುರ ದತ್ತ ದೇವಸ್ಥಾನ |
| 18. | ಕೊಡಗು | ಮಾಂದಲಪಟ್ಟಿ |
| 19. | ಕೋಲಾರ | ಆವನಿ ಬೆಟ್ಟ |
| 20. | ಕೊಪ್ಪಳ | ಇಟಗಿ ಮಹಾದೇವ ದೇವಸ್ಥಾನ |
| 21. | ಮಂಡ್ಯ | ಕೃಷ್ಣರಾಜ ಸಾಗರ ಅಣೆಕಟ್ಟು |
| 22. | ಮೈಸೂರು | ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ |
| 23. | ರಾಯಚೂರು | ಮುದಗಲ್ ಕೋಟೆ |
| 24. | ರಾಮನಗರ | ಮಂಚನಬೆಲೆ |
| 25. | ಶಿವಮೊಗ್ಗ | ಗುಡವಿ ಪಕ್ಷಿಧಾಮ |
| 26. | ತುಮಕೂರು | ಸಿರಾ ಕೋಟೆ |
| 27. | ಉಡುಪಿ | ಕಾಪು ಬೀಚ್ |
| 28. | ಉತ್ತರ ಕನ್ನಡ | ಸದಾಶಿವಗಡ ಕೋಟೆ |
| 29. | ವಿಜಯನಗರ | ಹಂಪಿ |
| 30. | ವಿಜಯಪುರ | ಆಲಮಟ್ಟಿ ಅಣೆಕಟ್ಟು |
| 31. | ಯಾದಗಿರಿ | ಯಾದಗಿರಿ ಕೋಟೆ |